ಪ್ರಕಟಣೆ

ಉಪಾಧ್ಯಕ್ಷರು: ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್‌ರವರು ಚೈನಾ ದೇಶದಲ್ಲಿ ಶೈಕ್ಷಣಿಕ ಪ್ರವಾಸದಲ್ಲಿ ಪಾಲ್ಗೊಳ್ಳುತ್ತಿರುವ ಕಾರಣ ದಿನಾಂಕ 5.07.2007 ರಿಂದ 17.07.2007 ರವರೆಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ. ಮಾನ್ಯ ಸದಸ್ಯರು ಗೈರುಹಾಜರಾಗಲು ಸದನದ ಸಹಮತ ಇದೆ ಎಂದು ಭಾವಿಸಲಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್‌ರವರಿಗೆ ಸದನಕ್ಕೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದ ಶಾಸಕರ ಸಭೆಯನ್ನು ಇವತ್ತು ಸಂಜೆ 5.30 ಗಂಟೆಗೆ ಕರೆಯಲಾಗಿದೆ ಎಂದು ಮಾನ್ಯ ಬಿ.ಆರ್.ಪಾಟೀಲ್ ರವರು ಹೇಳಿದ್ದಾರೆ. ಆದ್ದರಿಂದ, ಈ ದಿವಸದ ಸಭೆಯನ್ನು ಮುಕ್ತಾಯಗೊಳಿಸಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸದನವು ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5.32 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 12.07.2007ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)